**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 4622/2022**

**ಸಾಕ್ಷಿಗೆ ದಿನಾಂಕ 21.12.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಫ್ರೋಸ್ ಪಾಷಾ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ಕೆ. ರಿಯಾಜ್ ಪಾಷಾ | ಸಿ.ಡಬ್ಲ್ಯೂ-2 |
| ವಯಸ್ಸು | : | 37 | |
| ಉದ್ಯೋಗ | : | ಆಟೋ ಚಾಲಕ | |
| ವಾಸಸ್ಥಳ | : | ಹಂಪಾಪುರ | |

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯವಿರುತ್ತದೆ. ಆತನು ನಮ್ಮ ಊರಿನವಾಗಿರುತ್ತಾನೆ. ನನಗೆ ಚಾಸಾ 3 ರಿಂದ 9 ರವರ ಪರಿಚಯವಿರುತ್ತದೆ. ದಿನಾಂಕಃ 16.11.2020 ರಂದು ದೀಪಾವಳಿ ಹಬ್ಬದ ದಿನ ಬೆಳಿಗ್ಗೆ 10.00 ಗಂಟೆಗೆ ನನ್ನ ಮೊಬೈಲ್ ಸಂಖ್ಯೆ 9535591486 ನಲ್ಲಿ ಫೇಸ್ ಬುಕ್ ಅಕೌಂಟ್ ಅನ್ನು ತೆರೆದು ನೋಡುತ್ತಿದ್ದಾಗ ಲಕ್ಷ್ಮೀ ನಾರಾಯಣ ಆಜಾದ್ ಎಂಬ ಫೇಸ್ ಬುಕ್ ಪೇಜ್ ನಲ್ಲಿ ಬುರ್ಕಾ ಮತ್ತು ತುರ್ಕಾ ಈ ದೇಶದ ಮಾರಕ ಎಂದು ಪೋಸ್ಟ ಹಾಕಿರುವುದು ಕಂಡು ಬಂದಿರುತ್ತದೆ. ನಂತರ ಅದನ್ನು ನಮ್ಮ ಊರಿನ ಚಾಸಾ 3, 4 ಮತ್ತು 7 ರವರಿಗೆ ತೋರಿಸಿರುತ್ತೇನೆ. ನಂತರ ಸದರಿ ಪೋಸ್ಟ ನ ಬಗ್ಗೆ ವಿಚಾರಿಸಿದಾಗ ನಮ್ಮ ಊರಿನ ಲಕ್ಷ್ಮೀ ನಾರಾಯಣ ಎಂಬುವವರು ಆ ರೀತಿ ಪೋಸ್ಟ ಅನ್ನು ಕೋಮು ಪ್ರಚೋದನೆ ಮತ್ತು ಒಂದು ಧರ್ಮಕ್ಕೆ ಘಾಸಿ ಉಂಟು ಮಾಡುವ ಉದ್ದೇಶದಿಂದ ಆ ರೀತಿ ಮಾಡಿರುತ್ತಾನೆ. ನಮ್ಮ ಗ್ರಾಮದಲ್ಲಿ ಎಲ್ಲರೂ ಸಹಬಾಳ್ವೆಯಿಂದ ಇರುತ್ತೇವೆ. ದಿನಾಂಕಃ 18.11.2020 ರಂದು ಚಾಸಾ 1 ರವರು ನಮ್ಮ ಊರಿಗೆ ಬೀಟ್ ಕರ್ತವ್ಯಕ್ಕೆ ಬಂದಾಗ ಅವರಿಗೂ ಸದರಿ ವಿಚಾರ ಗೊತ್ತಾಗಿದ್ದು ಅವರು ದಿನಾಂಕಃ 20.11.2020 ದಾಖಲೆಯನ್ನು ತೆಗೆದುಕೊಂಡು ಬರುವಂತೆ ಕೇಳಿರುತ್ತಾರೆ. ನಂತರ ಸದರಿ ಪೋಸ್ಟ ಗಳಸ್ಕ್ರೀನ್ ಶಾಟ್ ಅನ್ನು ತೆಗೆದು ಬ್ಲಾಕ್ ಮತ್ತು ವೈಟ್ ಪೇಪರ್ ನಲ್ಲಿ ಪ್ರಿಂಟ್ ಹಾಕಿಸಿ ಅದರ ಜೊತೆ ಸಿಡಿಯನ್ನು ಸಹ ಮಾಡಿಸಿ ದಿನಾಂಕಃ 20.11.2020 ರಂದು ಹೆಚ್.ಡಿ.ಕೋಟೆ ಪೋಲಿಸ್ ಠಾಣೆಗೆ ಬಂದು ನೀಡಿರುತ್ತೇನೆ. ಸಾಕ್ಷಿದಾರರು ಸದರಿ ಸ್ಕ್ರೀನ್ ಶಾಟ್ ನ 8 ಪುಟಗಳನ್ನು ನೋಡಿ ಗುರುತಿಸಿದ್ದು

ಅವುಗಳನ್ನು  ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿರುತ್ತದೆ. ಸಿಡಿಯನ್ನು ನಿಪಿ 2 ಮತ್ತು 65 ಬಿ ದೃಢೀಕರಣ ಪತ್ರವನ್ನು ನಿಪಿ 3 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ನಿಪಿ 3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು. ಸದರಿ ವಿಚಾರವಾಗಿ ನಾನು ಹೇಳಿಕೆಯನ್ನು ನೀಡಿರುತ್ತೇನೆ.  ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ಸದರಿ ಕೃತ್ಯವನ್ನು ಎಸಗಿರುತ್ತಾನೆ.

**ಪಾಟೀಸವಾಲುಃ** ಆರೋಪಿತರ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ